ಫಾರಂ ನಂ.4 (ಕ್ರಿಮಿನಲ್)
ಡಿಪೋಶಿಷನ್ ಶೀಟ್ಸ್

# ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯದಲ್ಲಿ, ತರೀಕೆರೆ.

## ಸಿ ಸಿ ನಂಃ*144/2015*

ಸಾಕ್ಷಿಯ ಹೆಸರುಃ ಉಮಾಶಂಕರ
ತಂದೆಯ ಹೆಸರುಃ ತ್ಯಾರಪ್ಪ ಪಿ ಡಬ್ಲ್ಯುಃ *01*
ವಯಸ್ಸು ಃ *45* ವರ್ಷ
ಉದ್ಯೋಗ ಃ ಹೆಚ್ ಸಿ, ತರೀಕೆರೆ ಪೊಲೀಸ್ ಠಾಣೆ
ವಾಸ ಸ್ಥಳ ಃ ತರೀಕೆರೆ
**ದಿನಾಂಕಃ*19-01-2021* ರಂದು** ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಸಿ.ಆರ್.ಪಿ.ಸಿ ಕಲಂ. *299* ರ ಅಡಿಯಲ್ಲಿ ಸಾಕ್ಷಿಯ ಹೇಳಿಕೆ**

**ಮುಖ್ಯವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃ**

ನಾನು ಎರಡು ವರ್ಷದಿಂದ ತರೀಕೆರೆ ಪೊಲೀಸ್ ಠಾಣೆಯಲ್ಲಿ ಹೆಚ್ ಸಿ ಆಗಿ ಕಾರ್ಯನಿರ್ವಹಿಸುತ್ತಿದ್ದೇನೆ.

ದಿಃ *09-12-2019* ರಂದು ಈ ನ್ಯಾಯಾಲಯದ ಆದೇಶದ ಮೇರೆಗೆ ದಿಃ *03-01-2020* ರಂದು ಪ್ರೊಕ್ಲಮೇಷನ್ ಅನ್ನು *6*ನೇ ಆರೋಪಿ ನೇತಾಜಿ, *7*ನೇ ಆರೋಪಿ ಅಜ್ಜು, *9*ನೇ ಆರೋಪಿ ಲೋಕಿ ಯಾನೆ ಲೋಕೇಶ, *11*ನೇ ಆರೋಪಿ ದೇವಿಪ್ರಸಾದ್, *12*ನೇ ಆರೋಪಿ ಪ್ರದೀಪ ಯಾನೆ ಚಿರಂಜೀವಿ ರವರ ಮೇಲೆ ಜಾರಿ ಮಾಡಲು ಬೆಂಗಳೂರಿನ ಬನಶಂಕರಿಗೆ ಬೇಟಿ ಕೊಟ್ಟಿದ್ದೇನೆ. ನ್ಯಾಯಾಲಯದ ಪ್ರೋಕ್ಲಮೇಷನ್ ಅನ್ನು ಆರೋಪಿತರು ವಾಸವಿದ್ದ ಊರಿನಲ್ಲಿ ಜಾರಿಗೊಳಿಸಲು ಹೋಗಿ ಪಂಚಾಯ್ತಿದಾರರಾದ ಫಾರೂಕ್ ಮಹಮ್ಮದ್ ಬಿನ್ ಹುಸೇನ್ ಮತ್ತು ವಿಶ್ವನಾಥ ಬಿನ್ ಪರಮೇಶರವರು ಹಾಜರಿದ್ದು ಆರೋಪಿತರು ಸದರಿ ವಿಳಾಸದಲ್ಲಿ ವಾಸವಿರುವುದಿಲ್ಲ ಎಂದು ಹೇಳಿರುತ್ತಾರೆ. ಮುಖ್ಯಾಧಿಕಾರಿ, ಬಿ ಬಿ ಎಂ ಪಿ ಕಚೇರಿ, ಬನಶಂಕರಿ ಕಡೆಯವರಿಂದ ಟಾಂ ಟಾಂ ಸಾರಿಸಿ, ಪ್ರೋಕ್ಲಮೇಷನ್ ನ ಪ್ರತಿಗಳನ್ನು ಬಿ ಬಿ ಎಂ ಪಿ ಕಚೇರಿ, ಬನಶಂಕರಿಯ ನೋಟೀಸು ಬೋರ್ಡಿಗೆ ಮತ್ತು ಆರೋಪಿತರು ವಾಸವಿದ್ದ ಮನೆಗಳ ಮುಖ್ಯ ರಸ್ತೆಗಳಲ್ಲಿ ಅಂಟಿಸಿರುತ್ತೇನೆ.

ನಂತರ ಮುಖ್ಯಾಧಿಕಾರಿ, ಬಿ ಬಿ ಎಂ ಪಿ ಕಚೇರಿ, ಬನಶಂಕರಿ ರವರಿಗೆ ಒಂದು ಪತ್ರವನ್ನು ಕೊಟ್ಟು ಆರೋಪಿತರ ಹೆಸರಿನಲ್ಲಿ ಇರುವ ಆಸ್ತಿಗಳ ವಿವರಣೆಗಳನ್ನು ಪಡೆದುಕೊಂಡಿದ್ದೇನೆ. ಸ್ಥಳದಲ್ಲಿ ಒಂದು ಮಹಜರು ಬರೆದಿದ್ದೇನೆ ಮತ್ತು ಪಂಚಾಯ್ತಿದಾರರ ಸಹಿಗಳನ್ನು ಪಡೆದಿರುತ್ತೇನೆ. ಆ ಮೂಲಕ ನ್ಯಾಯಾಲಯದ ಪ್ರೊಕ್ಲಮೇಷನ್ ಅನ್ನು ಜಾರಿ ಮಾಡಿರುತ್ತೇನೆ. ದಿಃ*03-01-2020* ರ ಐದು ಮಹಜರ್ ಗಳನ್ನು ನ್ಯಾಯಾಲಯಕ್ಕೆ ಕೊಟ್ಟಿದ್ದೇನೆ. ಅವುಗಳನ್ನು ನಿಪಿ *1* ರಿಂದ *5* ಎಂದು, ಸಾಕ್ಷಿ ಸಹಿಗಳನ್ನು ನಿಪಿ *1(ಎ)* ರಿಂದ *5(ಎ)* ಎಂದು, ಬಿ ಬಿ ಎಂ ಪಿ ಕಚೇರಿಯವರಿಗೆ ನೀಡಿದ ಪತ್ರಗಳನ್ನು ನಿಪಿ *6* ರಿಂದ *10* ಎಂದು, ಬಿ ಬಿ ಎಂ ಪಿ ಕಚೇರಿಯವರು ನಮಗೆ ನೀಡಿದ ದಿಃ *25-02-2020* ರ ಪತ್ರಗಳನ್ನು ನ್ಯಾಯಾಲಯಕ್ಕೆ ಕೊಟ್ಟಿದ್ದೇನೆ. ಅದನ್ನು ನಿಪಿ *7* ರಿಂದ *15* ಎಂದು

ಗುರುತಿಸಲಾಯ್ತು. ಇವುಗಳ ಬಗ್ಗೆ ಒಂದು ವರದಿಯನ್ನು ಕೊಟ್ಟಿದ್ದೇನೆ. ಅದನ್ನು ನಿಪಿ *16* ಎಂದು, ಸಾಕ್ಷಿ ಸಹಿಯನ್ನು ನಿಪಿ *16*(ಎ) ಎಂದು ಗುರುತಿಸಲಾಯ್ತು.

ಮರುವಿಚಾರಣೆ ಇಲ್ಲಃ

*(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)*

**ಓ ಹೇ ಕೇ ಸ ಇ ಎ ಒ**

ಸಹಿ/-

(ಎಂ.ಸಿ. ನಂಜೇಗೌಡ)
ಪ್ರಪ್ರದನ್ಯಾದಂಃ ತರೀಕೆರೆ.